# ಮಂಗಳೂರು ಮಹಾನಗರ ಪಾಲಿಕೆ

**ಆಯುಕ್ತರ ಕಚೇರಿ, ಮಹಾನಗರ ಪಾಲಿಕೆ, ಮಂಗಳೂರು**

ಸಂಖ್ಯೆ : ಮ.ನ.ಪಾ./ಕಂದಾ.ಎ/ಸಿಆರ್9/2009-10/ಎ1 ದಿನಾಂಕ : 05.02.2010

## ಪ್ರಕಟಣೆ

**(1976ರ ಕರ್ನಾಟಕ ಪೌರ ನಿಗಮಗಳ ಅಧಿನಿಯಮ ಪ್ರಕರಣ 106ರಂತೆ)**

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಮಸ್ತ ನಿವೇಶನ ಹಾಗೂ ಕಟ್ಟಡದ ಮಾಲೀಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, 1976ರ ಕರ್ನಾಟಕ ಪೌರನಿಗಮಗಳ ಸ್ವತ್ತಿನ ತೆರಿಗೆ ವಿಧಿಸುವಿಕೆ, ನಿರ್ಧರಣಾ ವಿಧಾನ, ಸಂದಾಯ ಇತ್ಯಾದಿ ಪ್ರಕರಣಗಳಿಗೆ ಮತ್ತು ಅವುಗಳಿಗೆ ಸಂಬಂಧಿಸಿದ ನಿಯಮಗಳಿಗೆ ಕರ್ನಾಟಕ ಘನ ಸರಕಾರವು ತಿದ್ದುಪಡಿಗಳನ್ನು ತಂದು ತೆರಿಗೆಗೆ ಗುರಿಯಾಗುವ ಮೌಲ್ಯದ ಅಂದರೆ ವಾರ್ಷಿಕ ಬಾಡಿಗೆ ಮೌಲ್ಯದ (ARV) ಆಧಾರದಲ್ಲಿ ನಿರ್ಧರಣೆ ಮಾಡಲಾಗುತ್ತಿದ್ದ ತೆರಿಗೆ ಪದ್ಧತಿಯನ್ನು ಕೈಬಿಟ್ಟು ತೆರಿಗೆಗೆ ಗುರಿಯಾಗುವ ಬಂಡವಾಳ ಮೌಲ್ಯ ಅಂದರೆ ಕರ್ನಾಟಕ ಸ್ಟಾಂಪ್ ಕಾಯ್ದೆ 1957, ಅಧಿನಿಯಮ 45ಬಿ ರನ್ವಯ ಕಾಲಕಾಲಕ್ಕೆ ನಿಗದಿಯಾಗುವ ಬಂಡವಾಳ ಮೌಲ್ಯದ ಆಧಾರದ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು 01.04.2002ರಿಂದ ಜಾರಿಗೆ ತಂದಿರುತ್ತದೆ. ಈ ಬಂಡವಾಳ ಮೌಲ್ಯ ಆಧಾರದ ಸ್ವಯಂಘೋಷಿತ ತೆರಿಗೆ ಪದ್ಧತಿಯನ್ನು 01.04.2008ರಿಂದ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಜಾರಿಗೆ ತರಲು ಆಡಳಿತಾಧಿಕಾರಿಯವರು ಠರಾವು ಸಂಖ್ಯೆ **287/2007-08, ದಿನಾಂಕ : 30.10.2007**ರಂತೆ ನಿರ್ಣಯಿಸಿರುತ್ತಾರೆ. ಸದ್ರಿ ನಿರ್ಣಯದ ಪ್ರಕಾರ 18.02.2008ರಂದು ಪ್ರಕಟಣೆಯನ್ನು ನೀಡಲಾಗಿದೆ. ಪ್ರಕೃತ ನಿಗದಿಪಡಿಸಿದ ದರಗಳಿಂದ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆಯಲ್ಲಿ ಆಗಿರುವ ಗಣನೀಯ ಏರಿಕೆಯನ್ನು ಮನಗಂಡು ಮಂಗಳೂರು ಮಹಾನಗರಪಾಲಿಕಾ ಪರಿಷತ್ತು ದಿನಾಂಕ : 25.01.2010ರಂದು ನಡೆದ ಸಾಮಾನ್ಯ ಸಭೆಯಲ್ಲಿ ದರಗಳನ್ನು ಪರಿಷ್ಕರಿಸಿ ಜಾರಿಗೆ ತರಲು ನಿರ್ಣಯಿಸಿರುತ್ತದೆ. ಸರಕಾರವು ದಿನಾಂಕ : 29.01.2010ರಂದು ಪರಿಷತ್ತು ನಿರ್ಣಯಿಸಿರುವ ಪರಿಷ್ಕೃತ ದರಗಳನ್ನು ದಿನಾಂಕ : 01.04.2008ರಿಂದ ಅನ್ವಯವಾಗುವಂತೆ ಜಾರಿಗೆ ತರಲು ಅನುಮೋದನೆ ನೀಡಿರುತ್ತದೆ. ಪರಿಷ್ಕೃತ ದರಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಆಸ್ತಿಯ ವಿವರಗಳು | ತೆರಿಗೆ ದರ |
|---|---|---|
| 1 | ವಾಸ್ತವ್ಯ ಉದ್ದೇಶದ ಕಟ್ಟಡಗಳಿಗೆ | 0.5% (ಒಂದು ಲಕ್ಷ ರೂ. ಮೌಲ್ಯಕ್ಕೆ ರೂಪಾಯಿ 500/-) |
| 2 | ವಾಣಿಜ್ಯ ಉದ್ದೇಶದ ಕಟ್ಟಡಗಳಿಗೆ | 1 .5% (ಒಂದು ಲಕ್ಷ ರೂ. ಮೌಲ್ಯಕ್ಕೆ ರೂಪಾಯಿ 1500/-) |
| 3 | ವಾಸ್ತವ್ಯೇತರ / ವಾಣಿಜ್ಯೇತರ ಉದ್ದೇಶದ ಕಟ್ಟಡಗಳಿಗೆ | 1.0% (ಒಂದು ಲಕ್ಷ ರೂ. ಮೌಲ್ಯಕ್ಕೆ ರೂಪಾಯಿ 1000/-) |
| 4 | ಕೃಷಿಯೇತರ ಖಾಲಿ ಜಮೀನುಗಳಿಗೆ :<br>I. 1000 ಚದರ ಮೀಟರ್‌ವರೆಗಿನ ಖಾಲಿ ಜಾಗಗಳಿಗೆ<br>II. 1000 ಚದರ ಮೀಟರುಗಳಿಗೆ ಮೇಲ್ಪಟ್ಟು 4000 ಚದರ ಮೀಟರ್ ವರೆಗಿನ ಖಾಲಿ ಜಾಗಗಳಿಗೆ<br>III. 4000 ಚದರ ಮೀಟರುಗಳಿಗಿಂತ ಮೇಲ್ಪಟ್ಟ ಖಾಲಿ ಜಾಗಗಳಿಗೆ | <br>0.1% (ಒಂದು ಲಕ್ಷ ರೂ. ಮೌಲ್ಯಕ್ಕೆ ರೂಪಾಯಿ 100/-)<br>0.025% (ಒಂದು ಲಕ್ಷ ರೂ. ಮೌಲ್ಯಕ್ಕೆ ರೂಪಾಯಿ 25/-)<br>0.01% (ಒಂದು ಲಕ್ಷ ರೂ. ಮೌಲ್ಯಕ್ಕೆ ರೂಪಾಯಿ 10/-) |
| 5 | ಕ.ಪೌ.ನಿ.ಅ. 110ರ ಪ್ರಕಾರ ತೆರಿಗೆಯಿಂದ ವಿನಾಯಿತಿಗೊಳಪಟ್ಟ ಕಟ್ಟಡ ಅಥವಾ ಜಮೀನು ಯಾ ಇವೆರಡೂ ಸೇರಿದಂತೆ ನಿಯಮ 7ಎ(1)ರ ಪ್ರಕಾರ ವಿಧಿಸಲಾದ ಸೇವಾ ಶುಲ್ಕ (ಸಾರ್ವಜನಿಕ ಆರಾಧನಾ ಸ್ಥಳಗಳನ್ನು ಹೊರತುಪಡಿಸಿ) | ಸ್ವಯಂ ನಿರ್ಧರಣೆ ಮಾಡಲಾಗುವ ಒಟ್ಟು ಆಸ್ತಿ ತೆರಿಗೆಯ ಶೇಕಡಾ 25. |

ಆದುದರಿಂದ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಮಸ್ತ ಕಟ್ಟಡಗಳ ಹಾಗೂ ನಿವೇಶನಗಳ ಮಾಲೀಕರು 01.04.2008ರಿಂದ ವಾರ್ಷಿಕ ಬಂಡವಾಳ ಮೌಲ್ಯದ ಆಧಾರದಲ್ಲಿ ಮೇಲಿನ ಷೆಡ್ಯೂಲಿನಲ್ಲಿ ವಿವರಿಸಿದ ದರಗಳಂತೆ ತಮ್ಮ ಆಸ್ತಿ ತೆರಿಗೆಯನ್ನು **ದಿನಾಂಕ : 31.03.2010ರೊಳಗಾಗಿ** ಪಾವತಿಸುವಂತೆ ಕೋರಲಾಗಿದೆ. ಈಗಾಗಲೇ ತೆರಿಗೆ ಪಾವತಿಸಿ ಪಾಲಿಕೆಯೊಂದಿಗೆ ಸಹಕರಿಸಿರುವ ತೆರಿಗೆದಾರರು ಪಾವತಿಸಿರುವ ಹೆಚ್ಚುವರಿ ವ್ಯತ್ಯಾಸ ಮೊತ್ತವನ್ನು ಮುಂದಿನ ಅವಧಿಗೆ ಹೊಂದಾಣಿಕೆ ಮಾಡುವಂತೆ ಅನುಕೂಲ ಕಲ್ಪಿಸಲಾಗಿದೆ. ಈ ಬಗ್ಗೆ ಆಸ್ತಿ ತೆರಿಗೆ ಘೋಷಣಾ ವಿವರಪಟ್ಟಿ (RETURNS), ತೆರಿಗೆ ಪಾವತಿ ಚಲನು ಇತ್ಯಾದಿಗಳನ್ನು ಈಗಾಗಲೇ ನಿಗದಿಪಡಿಸಿರುವ ಪಾಲಿಕೆಯ ವಾರ್ಡು ಕಚೇರಿಗಳು, ಉಪಕಚೇರಿ ಮತ್ತು ಕೇಂದ್ರ ಕಚೇರಿಯಲ್ಲಿ ಪಡೆಯಬಹುದಾಗಿದೆ. ನಾಗರಿಕರು ಕೂಡಲೇ ತಮ್ಮ ತಮ್ಮ ಆಸ್ತಿಗಳಿಗೆ ಸಂಬಂಧಿಸಿದ ಸ್ವತ್ತಿನ ತೆರಿಗೆಯನ್ನು ಪಾವತಿಸಿ ನಗರದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವಂತೆ ಕೋರಿದೆ.

**ಆಸ್ತಿ ತೆರಿಗೆ ವಿವರ ಪಟ್ಟಿ (ರಿಟರ್ನ್ಸ್), ಕೈಪಿಡಿ, ತೆರಿಗೆ ಪಾವತಿ ಚಲನು ದೊರಕುವ ಹಾಗೂ ವಿವರಪಟ್ಟಿ ಸಲ್ಲಿಸಲು ನಿಗದಿಪಡಿಸಿರುವ ಕಚೇರಿಗಳು :**

| ಕ್ರ.ಸಂ. | ವಾರ್ಡು ನಂಬ್ರ/ಗ್ರಾಮದ ಹೆಸರು | ನಿಗದಿಪಡಿಸಿರುವ ಕಚೇರಿ |
|---|---|---|
| 1 | 1ನೇ ಉತ್ತರ, 1ನೇ ದಕ್ಷಿಣ, 2, 3ನೇ ಪೂರ್ವ ಮತ್ತು ಪಶ್ಚಿಮ, 4, 5, 6, 7, 8, 9, 10, 11, 12, 13 14, 15 ಮತ್ತು 16ನೇ ವಾರ್ಡು | ಮಂಗಳೂರು ಮಹಾನಗರಪಾಲಿಕೆ ಕೇಂದ್ರ ಕಚೇರಿ, ಲಾಲ್‌ಬಾಗ್ (ತಳ ಅಂತಸ್ತು) |
| 2 | 17, 25 ಮತ್ತು ಕಂಕನಾಡಿ 'ಬಿ' ಗ್ರಾಮ | ಆಸ್ತಿ ತೆರಿಗೆ ವಿವರಪಟ್ಟಿ ಸ್ವೀಕೃತಿ ಕೇಂದ್ರ, ವೆಲೆನ್ಸಿಯಾ ಪಾರ್ಕ್ ಬಳಿ |
| 3 | 18, 19, 20, 21, 22, 23 ಮತ್ತು 24ನೇ ವಾರ್ಡು | ಆಸ್ತಿ ತೆರಿಗೆ ವಿವರಪಟ್ಟಿ ಸ್ವೀಕೃತಿ ಕೇಂದ್ರ, ನೆಹರೂ ಮೈದಾನ ಕಚೇರಿ, (ಮನಪಾ ಸಹಾಯಕ ಆರೋಗ್ಯಾಧಿಕಾರಿಯವರ ಕಚೇರಿ) |
| 4 | ಬೆಂಗ್ರೆ, ಕೂಳೂರು, ಪಡುಕೋಡಿ, ಬಂಗ್ರಕೂಳೂರು | ಮಹಾನಗರಪಾಲಿಕೆ ಉಪಕಚೇರಿ, ಕೂಳೂರು (ರಾಯಿಕಟ್ಟೆ) |
| 5 | ದೇರೆಬೈಲು-1 ಮತ್ತು 2 | ಮಹಾನಗರಪಾಲಿಕೆ ಉಪಕಚೇರಿ, ದೇರೆಬೈಲು, ಕೊಂಚಾಡಿ |
| 6 | ಕಾವೂರು, ಮರಕಡ, ಕುಂಜತ್ತಬೈಲ್, ಪಚ್ಚನಾಡಿ ಪಂಜಿಮೊಗರು | ಮಹಾನಗರಪಾಲಿಕೆ ಉಪಕಚೇರಿ, ಕಾವೂರು (ಕಾವೂರು ಜಂಕ್ಷನ್) |
| 7 | ಪದವು-1 ಮತ್ತು 2, ಕದ್ರಿ-ಬಿ, ಮರೋಳಿ, ಜಪ್ಪಿನಮೊಗರು, ಅಳಪೆ, ಬಜಾಲ್ ಮತ್ತು ಕಣ್ಣೂರು ಗ್ರಾಮ | ಮಹಾನಗರಪಾಲಿಕೆ ಉಪಕಚೇರಿ, ಬಿಕರ್ನಕಟ್ಟೆ (ನಂತೂರು ಜಂಕ್ಷನ್ ಬಳಿ) |
| 8 | ತಿರುವೈಲ್ | ಮಹಾನಗರಪಾಲಿಕೆ ಉಪಕಚೇರಿ, ತಿರುವೈಲು (ವಾಮಂಜೂರು) |
| 9 | ಕುಡುಪು | ಕುಡುಪು ಗ್ರಾಮ, ಕರಣೀಕರ ಕಚೇರಿಯ ಪಕ್ಕದ ಸಮುದಾಯ ಭವನ |
| | **ಸುರತ್ಕಲ್ ಉಪಕಚೇರಿ :** | |
| 10 | ಸುರತ್ಕಲ್ ಮತ್ತು ಇಡ್ಯಾ | ಸುರತ್ಕಲ್ ಉಪಕಚೇರಿ |
| 11 | ಕಾಟಿಪಳ್ಳ | ಕಾಟಿಪಳ್ಳ ಪಂಚಾಯತ್ ಕಚೇರಿ |
| 12 | ಹೊಸಬೆಟ್ಟು ಮತ್ತು ಕುಳಾಯಿ | ಕುಳಾಯಿ ಪಂಚಾಯತ್ ಕಚೇರಿ |
| 13 | ಪಣಂಬೂರು, ಬೈಕಂಪಾಡಿ ಮತ್ತು ತಣ್ಣೀರುಬಾವಿ | ಪಂಚಾಯತ್ ಕಚೇರಿ, ಕೂರಿಕಟ್ಟ ರಸ್ತೆ |

**ಆಸ್ತಿ ತೆರಿಗೆ ಪಾವತಿ ಮಾಡಲು ನಿಗದಿಪಡಿಸಿದ ಬ್ಯಾಂಕುಗಳು**

| ಕ್ರ.ಸಂ. | ವಾರ್ಡು ಸಂಖ್ಯೆ / ಗ್ರಾಮದ ಹೆಸರು | ಪಾವತಿ ಮಾಡಲು ನಿಗದಿಪಡಿಸಿದ ಬ್ಯಾಂಕುಗಳು |
|---|---|---|
| 1 | 1ನೇ ಉತ್ತರ | ವಿಜಯಾ ಬ್ಯಾಂಕ್, ಅಶೋಕನಗರ |
| 2 | 1ನೇ ದಕ್ಷಿಣ | ಕೆನರಾ ಬ್ಯಾಂಕ್, ಉರ್ವ ಮಾರಿಗುಡಿ |
| 3 | 2 | ಕರ್ನಾಟಕ ಬ್ಯಾಂಕ್, ಬಿಜೈ ಮತ್ತು ಕೆನರಾ ಬ್ಯಾಂಕ್, ಕುಂಟಿಕಾನ |
| 4 | 3ನೇ ಪೂರ್ವ ಮತ್ತು ಪಶ್ಚಿಮ | ಕೆನರಾ ಬ್ಯಾಂಕ್, ಕದ್ರಿ, ಮಲ್ಲಿಕಟ್ಟೆ ಮತ್ತು ಆಂಧ್ರ ಬ್ಯಾಂಕ್, ಬಿಜೈ |
| 5 | 4 | ಕರ್ನಾಟಕ ಬ್ಯಾಂಕ್, ಕೊಡಿಯಾಲ್‌ಬೈಲ್ ಮತ್ತು ಕೆನರಾ ಬ್ಯಾಂಕ್, ಕುಂಟಿಕಾನ |
| 6 | 5 | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ, ಅಳಕೆ |
| 7 | 6 | ಕೆನರಾ ಬ್ಯಾಂಕ್, ಗಾಂಧಿನಗರ |
| 8 | 7 | ಕರ್ನಾಟಕ ಬ್ಯಾಂಕ್, ಕುದ್ರೋಳಿ |
| 9 | 8 ಮತ್ತು 9 | ವಿಜಯಾ ಬ್ಯಾಂಕ್, ಅಳಕೆ |
| 10 | 10 ಮತ್ತು 11 | ಕೆನರಾ ಬ್ಯಾಂಕ್, ಬಂದರ್ |
| 11 | 12 | ಕಾರ್ಪೊರೇಷನ್ ಬ್ಯಾಂಕ್, ಕಾರ್ ಸ್ಟ್ರೀಟ್ |
| 12 | 13 | ಆಂಧ್ರ ಬ್ಯಾಂಕ್, ಹಂಪನ್‌ಕಟ್ಟ |
| 13 | 14 | ಪಂಜಾಬ್ ನ್ಯಾಷನಲ್ ಬ್ಯಾಂಕ್, ಬಲ್ಮಠ ರಸ್ತೆ ಮತ್ತು ಆಕ್ಸಿಸ್ ಬ್ಯಾಂಕ್, ಬಂಟ್ಸ್ ಹಾಸ್ಟೆಲ್ |
| 14 | 15 | ವಿಜಯಾ ಬ್ಯಾಂಕ್, ಬೆಂದೂರು ಮತ್ತು ಸಿಂಡಿಕೇಟ್ ಬ್ಯಾಂಕ್, ಕದ್ರಿ |
| 15 | 16 | ದೇನಾ ಬ್ಯಾಂಕ್, ಕಂಕನಾಡಿ |
| 16 | 17 | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕಂಕನಾಡಿ, ವೆಲೆನ್ಸಿಯಾ |
| 17 | 18 | ಪಂಜಾಬ್ ನ್ಯಾಷನಲ್ ಬ್ಯಾಂಕ್, ಬಲ್ಮಠ ರಸ್ತೆ |
| 18 | 19 | ಕಾರ್ಪೊರೇಷನ್ ಬ್ಯಾಂಕ್, ಪಾಂಡೇಶ್ವರ |
| 19 | 20 | ಅಲಹಾಬಾದ್ ಬ್ಯಾಂಕ್, ಹ್ಯಾಮಿಲ್ಟನ್ ಸರ್ಕಲ್ |
| 20 | 21 ಮತ್ತು 23 | ಕೆನರಾ ಬ್ಯಾಂಕ್, ಮೋರ್ಗನ್ಸ್ ಗೇಟ್ |
| 21 | 22 | ಕರ್ನಾಟಕ ಬ್ಯಾಂಕ್, ಬೋಳಾರ |
| 22 | 24 | ವಿಜಯಾ ಬ್ಯಾಂಕ್, ಮಾರ್ನಮಿಕಟ್ಟ |
| 23 | 25 | ಕೆನರಾ ಬ್ಯಾಂಕ್, ವೆಲೆನ್ಸಿಯಾ |
| 24 | ತೋಟ ಬೆಂಗ್ರೆ, ಕಸ್ಬಾ ಬೆಂಗ್ರೆ, ಬೊಕ್ಕಪಟ್ಣ ಬೆಂಗ್ರೆ, ಕುದ್ರೋಳಿ ಬೆಂಗ್ರೆ | ಸಿಂಡಿಕೇಟ್ ಬ್ಯಾಂಕ್, ಸ್ಯಾಂಡ್‌ಪಿಟ್ ಬೆಂಗ್ರೆ |
| 25 | ಜಪ್ಪಿನಮೊಗರು | ಸ್ಟೇಟ್ ಬ್ಯಾಂಕ್, ಕಂಕನಾಡಿ |
| 26 | ಅಳಪೆ, ಕಣ್ಣೂರು | ವಿಜಯಾ ಬ್ಯಾಂಕ್, ಅಳಪೆ, ಪಡೀಲ್ |
| 27 | ಕೂಳೂರು, ಪಡುಕೋಡಿ, ಬಂಗ್ರಕೂಳೂರು | ವಿಜಯಾ ಬ್ಯಾಂಕ್, ಕೂಳೂರು |
| 28 | ದೇರೆಬೈಲ್-1 | ಕರ್ನಾಟಕ ಬ್ಯಾಂಕ್, ದೇರೆಬೈಲ್ ಮತ್ತು ಇಂಡೋಓವರ್‌ಸೀಸ್ ಬ್ಯಾಂಕ್, ದೇರೆಬೈಲ್ |
| 29 | ದೇರೆಬೈಲ್-2 | ಬ್ಯಾಂಕ್ ಆಫ್ ಇಂಡಿಯಾ, ಕೊಟ್ಟಾರ |
| 30 | ಮರಕಡ, ಪಚ್ಚನಾಡಿ | ಕರ್ನಾಟಕ ಬ್ಯಾಂಕ್, ಪದವಿನಂಗಡಿ |
| 31 | ಕಂಕನಾಡಿ-ಬಿ, ಮರೋಳಿ, ಬಜಾಲ್ | ಕರ್ನಾಟಕ ಬ್ಯಾಂಕ್, ನಾಗುರಿ |
| 32 | ಪದವು-1, ಪದವು (ಸರಕಾರಿ) | ಸ್ಟೇಟ್ ಬ್ಯಾಂಕ್, ಸಿಲ್ವರ್ ಗೇಟ್ ಮತ್ತು ಯೆಯ್ಯಾಡಿ ಶಾಖೆ |
| 33 | ಪದವು-2, ಪದವು (ಸರಕಾರಿ) | ಸ್ಟೇಟ್ ಬ್ಯಾಂಕ್, ಸಿಲ್ವರ್ ಗೇಟ್ |
| 34 | ಕದ್ರಿ-ಬಿ | ಸ್ಟೇಟ್ ಬ್ಯಾಂಕ್, ಯೆಯ್ಯಾಡಿ |
| 35 | ಕಾವೂರು, ಕಾವೂರು (ಸರಕಾರಿ) | ಕೆನರಾ ಬ್ಯಾಂಕ್, ಪದವಿನಂಗಡಿ |
| 36 | ಕುಂಜತ್ತಬೈಲ್, ಕುಂಜತ್ತಬೈಲ್ (ಸರಕಾರಿ) ಪಂಜಿಮೊಗರು, ಪಂಜಿಮೊಗರು (ಸರಕಾರಿ) | ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್, ಕಾವೂರು |
| 37 | ಕುಡುಪು, ತಿರುವೈಲು | ವಿಜಯಾ ಬ್ಯಾಂಕ್, ವಾಮಂಜೂರು |
| | **ಸುರತ್ಕಲ್ ಉಪಕಚೇರಿ ವ್ಯಾಪ್ತಿ :** | |
| 38 | ಇಡ್ಯಾ | ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್, ಸುರತ್ಕಲ್ |
| 39 | ಸುರತ್ಕಲ್ | ಕಾರ್ಪೊರೇಷನ್ ಬ್ಯಾಂಕ್, ಮುಕ್ಕ |
| 40 | ಕುಳಾಯಿ | ಸಿಂಡಿಕೇಟ್ ಬ್ಯಾಂಕ್, ಕುಳಾಯಿ |
| 41 | ಕಾಟಿಪಳ್ಳ | ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್, ಕಾಟಿಪಳ್ಳ |
| 42 | ಹೊಸಬೆಟ್ಟು | ವಿಜಯಾ ಬ್ಯಾಂಕ್, ಹೊಸಬೆಟ್ಟು |
| 43 | ತಣ್ಣೀರು ಬಾವಿ, ಬೈಕಂಪಾಡಿ | ಕಾರ್ಪೊರೇಷನ್ ಬ್ಯಾಂಕ್, ಬೈಕಂಪಾಡಿ |

ಹೆಚ್ಚಿನ ಮಾಹಿತಿಗಾಗಿ (1) ಪಾಲಿಕೆಯ ವೆಬ್‌ಸೈಟ್ ವಿಳಾಸ **www.mangalorecity.gov.in** (2) ಕಚೇರಿ ದೂರವಾಣಿ ಸಂಖ್ಯೆ : 2220313ರಿಂದ 318 (3) ಕಂದಾಯ ಅಧಿಕಾರಿಯವರ ಕಚೇರಿ ದೂರವಾಣಿ ಸಂಖ್ಯೆ : 2220308ರಲ್ಲಿ ಸಂಪರ್ಕಿಸಬಹುದು.

**ಸಹಿ/- (ಡಾ: ಕೆ.ಎನ್. ವಿಜಯ್ ಪ್ರಕಾಶ್), ಆಯುಕ್ತರು, ಮಹಾನಗರ ಪಾಲಿಕೆ, ಮಂಗಳೂರು**